# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೩<br>**Part – III** | ಬೆಂಗಳೂರು, ಬುಧವಾರ, ೩೧, ಡಿಸೆಂಬರ್, ೨೦೨೫ (ಪುಷ್ಯ, ೧೦, ಶಕವರ್ಷ, ೧೯೪೭)<br>BENGALURU, WEDNESDAY, 31, DECEMBER, 2025 ( PUSHYA , 10, SHAKAVARSHA, 1947) | ನಂ. ೮೫೦<br>**No. 850** |


<u>ಕರ್ನಾಟಕ ಸರ್ಕಾರ</u>

ಸಂಖ್ಯೆ: ನಅಇ 83 ಎಂಎಲ್ಆರ್ 2025(e)

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:31/12/2025.

<u>ಅಧಿಸೂಚನೆ</u>

ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ 3ನೇ ಪ್ರಕರಣದೊಂದಿಗೆ ಓದಿಕೊಂಡಂತೆ 4, 9, 349 ಮತ್ತು 355 ನೇ ಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ತಲಕಾಡು ಗ್ರಾಮ ಪಂಚಾಯಿತಿಯೊಂದಿಗೆ (ತಲಕಾಡು & ವಡೆಯಾಂಡರಹಳ್ಳಿ ಗ್ರಾಮಗಳನ್ನೊಳಗೊಂಡ ಗ್ರಾಮ ಪಂಚಾಯಿತಿ) ಬಿ.ಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯ ಟಿ.ಬೆಟ್ಟಹಳ್ಳಿ & ಕೂರುಬಾಳನಹುಂಡಿ ಗ್ರಾಮಗಳನ್ನು ಸೇರಿಸಿ ಅನುಬಂಧ-ಎ ರಲ್ಲಿ ನಮೂದಿಸಿರುವಂತೆ 'ಪರಿವರ್ತಿತ ಪ್ರದೇಶ'ವೆಂದು ಘೋಷಿಸಲು ಹಾಗೂ ಸದರಿ 'ಪರಿವರ್ತಿತ ಪ್ರದೇಶ' ವನ್ನು 'ತಲಕಾಡು ಪಟ್ಟಣ ಪಂಚಾಯಿತಿ' ಪ್ರದೇಶವೆಂದು ನಿರ್ದಿಷ್ಟಪಡಿಸಲು ಪ್ರಸ್ತಾಪಿಸಿ, ಅಧಿಸೂಚನೆ ಸಂಖ್ಯೆ ನಅಇ 83 ಎಂಎಲ್ಆರ್ 2025; ದಿನಾಂಕ:03/09/2025 ನ್ನು ದಿನಾಂಕ:04/09/2025 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-3 ರ ಸಂಖ್ಯೆ:537 ರಲ್ಲಿ ಪ್ರಕಟಿಸಿ, ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿ;

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ನಿಗದಿತ ಅವಧಿಯಲ್ಲಿ ಸ್ವೀಕೃತವಾಗಿರುವ ಆಕ್ಷೇಪಣೆ/ಸಲಹೆಗಳನ್ನು ಪರಿಗಣನೆಗೆ ತೆಗೆದುಕೊಂಡಿರುವುದರಿಂದ;

ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ 3ನೇ ಪ್ರಕರಣದೊಂದಿಗೆ ಓದಿಕೊಂಡಂತೆ 4, 9, 349 ಮತ್ತು 355 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಘನತೆವೆತ್ತ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ, 'ಅನುಸೂಚಿ-ಎ' ಮತ್ತು 'ಅನುಸೂಚಿ-ಬಿ' ರಲ್ಲಿ ನಮೂದಿಸಿರುವಂತೆ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ತಲಕಾಡು ಗ್ರಾಮ ಪಂಚಾಯಿತಿಯೊಂದಿಗೆ (ತಲಕಾಡು & ವಡೆಯಾಂಡರಹಳ್ಳಿ ಗ್ರಾಮಗಳನ್ನೊಳಗೊಂಡ ಗ್ರಾಮ ಪಂಚಾಯಿತಿ) ಬಿ.ಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯ ಟಿ.ಬೆಟ್ಟಹಳ್ಳಿ & ಕೂರುಬಾಳನಹುಂಡಿ ಗ್ರಾಮಗಳನ್ನು ಸೇರಿಸಿ 'ಪರಿವರ್ತಿತ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಪರಿವರ್ತಿತ ಪ್ರದೇಶವನ್ನು 'ತಲಕಾಡು ಪಟ್ಟಣ ಪಂಚಾಯಿತಿ' ಯ ಪ್ರದೇಶವೆಂದು ಪದನಾಮೀಕರಿಸಿ ಈ ಮೂಲಕ ಉದ್ಘೋಷಿಸಿರುತ್ತಾರೆ:

1. ಅಂಥ ಪ್ರದೇಶದ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಮತ್ತು ಇಪ್ಪತ್ತು ಸಾವಿರಕ್ಕಿಂತ ಹೆಚ್ಚಿಲ್ಲದ ಹೊರತು;
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋಮೀಟರ್ ಪ್ರದೇಶಕ್ಕೆ ನಾಲ್ಕುನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು;
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ ಮಂಜುನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಸಂಖ್ಯೆ:ನಅಇ 83 ಎಂಎಲ್ಆರ್ 2025(e).

<u>ಶೆಡ್ಯೂಲ್-ಎ</u>

| ಜಿಲ್ಲೆ | ಪರಿಗಣಿಸಲಾಗಿರುವ ಸ್ಥಳೀಯ ಸಂಸ್ಥೆ ಹೆಸರು | ಸೇರ್ಪಡೆಗೊಳಿಸಿರುವ ಪ್ರದೇಶಗಳ ವಿವರ | ಒಟ್ಟು ಪ್ರದೇಶ |
|---|---|---|---|
| ಮೈಸೂರು | ತಲಕಾಡು ಗ್ರಾಮ ಪಂಚಾಯಿತಿ (ತಲಕಾಡು & ವಡೆಯಾಂಡರಹಳ್ಳಿ ಗ್ರಾಮಗಳು) ಮತ್ತು ಬಿ.ಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯ ಟಿ.ಬೆಟ್ಟಹಳ್ಳಿ & ಕೂರುಬಾಳನಹುಂಡಿ ಗ್ರಾಮ | ಹಾಲಿ ತಲಕಾಡು ಗ್ರಾಮ ಪಂಚಾಯಿತಿಯ ತಲಕಾಡು & ವಡೆಯಾಂಡರಹಳ್ಳಿ ಗ್ರಾಮಗಳು ಮತ್ತು ಹಾಲಿ ಬಿ.ಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯ ಟಿ.ಬೆಟ್ಟಹಳ್ಳಿ & ಕೂರುಬಾಳನಹುಂಡಿ ಗ್ರಾಮಗಳ ವ್ಯಾಪ್ತಿಯ ಪ್ರದೇಶಗಳು | 28.97 ಚದರ ಕಿಲೋ ಮೀಟರ್‌ಗಳು |

<u>ಷೆಡ್ಯೂಲ್-ಬಿ</u>

ತಲಕಾಡು ಪಟ್ಟಣ ಪಂಚಾಯಿತಿ ಪರಿಷ್ಕೃತ ಎಲ್ಲೆಯ 'P' ಬಿಂದುವಿನಿಂದ ಪ್ರಾರಂಭವಾಗಿ ಅಂದರೆ ಟಿ ಬೆಟ್ಟಹಳ್ಳಿ ಗ್ರಾಮದ ಸ.ನಂ. 287 ವಾಯುವ್ಯ ಮೂಲೆಯಿಂದ ಪ್ರಾರಂಭವಾಗಿ ರಿ.ಸ.ನಂ. 287 ಉತ್ತರ ಗಡಿಯ ಮೂಲಕ ಈಶಾನ್ಯ ದಿಕ್ಕಿಗೆ ಅಭಿಮುಖವಾಗಿ ಚಲಿಸುತ್ತ ಮಂಡ್ಯ ಜಿಲ್ಲೆಯ ಗಡಿ ಅಂಚಿನಲ್ಲಿ ಸಾಗಿ ಸ.ನಂ.283 ಮತ್ತು ಸ.ನಂ.243ರ ಮದ್ಯ ತಲಕಾಡು ನಿಂದ ಮಳವಳ್ಳಿ ಮುಖ್ಯರಸ್ತೆಯನ್ನು ಸ.ನಂ.242, 241, 397, 239, ಈಶಾನ್ಯ ಅಭಿಮುಖವಾಗಿ ಚಲಿಸಿ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ತಪ್ಪಲಿನ ಮಾರ್ಗದಲ್ಲಿ ಮಂಡ್ಯ ಜಿಲ್ಲೆಯ ಕೊಡಗಹಳ್ಳಿ ಮಾರ್ಗ ದಾಟಿ ಸ.ನಂ. 236 ರಿಂದ ಚಲಿಸಿ ಈಶಾನ್ಯ ದಿಕ್ಕಿನ ಸ.ನಂ.224, 225ರಲ್ಲಿ ಸಂದಿಸುತ್ತದೆ. ನಂತರ ಈಶಾನ್ಯ ದಿಕ್ಕಿನಿಂದ ಪೂರ್ವ ಅಭಿಮುಖವಾಗಿ ರಿ.ಸ.ನಂ.225, 350. 351ರ ಮೂಲಕ ಚಲಿಸಿ ಸ.ನಂ.136, 135ರ ಮಧ್ಯ ಗಡಿ ವಿಜಯಪುರ ಮಾರ್ಗವಾಗಿ ಸ್ಥಳಿಯ ರಸ್ತೆ ಬದಿಯಲ್ಲಿ ಸಾಗಿ ಕೂರಬಾಳನಹುಂಡಿ ಗ್ರಾಮ ಎಲ್ಲೆಯ ಸ.ನಂ.131, 128, 127 ದಕ್ಷಿಣ ಅಭಿಮುಖವಾಗಿ ಚಲಿಸಿ ಸ.ನಂ. 88, 87, 86ರಲ್ಲಿ ಹಿಮ್ಮುಖವಾಗಿ (ಪಶ್ಚಿಮದ ಕಡೆಗೆ) ಚಲಿಸಿ ಸ.ನಂ. 152, 153. ದಕ್ಷಿಣಾಭಿಮುಖವಾಗಿ ನಂತರ 170. 159ರ ಮಧ್ಯ ಮಾಧವ ಮಂತ್ರಿ ನಾಲೆ ಹಾದು ಹೋಗಿದ್ದು ನಾಲಾ ಹಂಚಿನಲ್ಲಿ ಬಿ.ಶೆಟ್ಟಹಳ್ಳಿ (ಕುಕ್ಕೂರು ಗ್ರಾಮ) ಗಡಿ

ಭಾಗದಲ್ಲಿ ಆಗ್ನಿಯ ಅಭಿಮುಖವಾಗಿ ಸ.ನಂ.262, 264ರ ಮೂಲಕ ಚಲಿಸಿ ಸ.ನಂ. 1114, 1115 ಮಾಧವ ಮಂತ್ರಿ ಕಾಲುವೆ ಹಂಚಿನಲ್ಲಿ ಸಾಗಿ ಸ.ನಂ. 1176ರ ಆಗ್ನೆಯ ಮೂಲದಲ್ಲಿ ಸಂಧಿಸುತ್ತದೆ. ಮೂಲದಲ್ಲಿ ಕಾವೇರಿ ನದಿ ಗಡಿಯನ್ನು ಸಂಧಿಸಿ ಆಗ್ನೆಯ ಮೂಲದಿಂದ ದಕ್ಷಿಣಾಭಿಮುಖವಾಗಿ ಚಲಿಸಿ ರಿ.ಸ.ನಂ.1174, 1175 ಮೂಲಕ ದಕ್ಷಿಣಾಭಿಮುಖವಾಗಿ ನೈರುತ್ಯ ದಿಕ್ಕಿಗೆ ಕಾವೇರಿ ನದಿ ತಪ್ಪಲಿನಲ್ಲಿ (ಗಡಿ ಅಂಚು) ಸ.ನಂ.1172, 1244, 1278, 1289, 1294, 1337, ಮೂಲಕ ಸಾಗಿ ಸ.ನಂ.01ರಲ್ಲಿ ನೈರುತ್ಯ ದಿಕ್ಕಿನಲ್ಲಿ ಇತಿಹಾಸ ಪ್ರಸಿದ್ಧ ತಲಕಾಡು ಮರಳುಗುಡ್ಡೆ ಮತ್ತು ಪಂಚಲಿಂಗ ದೇವಾಲಯಗಳ ಸನ್ನಿಧಿಯಲ್ಲಿ ಸಂಧಿಸಿ ನಂತರ ನೈರುತ್ಯದಿಂದ ಪಶ್ಚಿಮ ಅಭಿಮುಖವಾಗಿ ರಿ.ಸ.ನಂ. 1 ರಿಂದ ವಾಯುವ್ಯ ದಿಕ್ಕಿಗೆ ಸ.ನಂ.218, 212, 211, 203, 202, ವಡೆಯಾಂಡಹಳ್ಳಿ ಗ್ರಾಮದ ಎಲ್ಲೇಯ ಸ.ನಂ.ಮೂಲಕ ಹಾದು ನಂತರ ತಿ.ನರಸೀಪುರ ತಲಕಾಡು ಮುಖ್ಯರಸ್ತೆ ಮತ್ತು ಸೇತುವೆಯನ್ನು ದಾಟಿ ಕಾವೇರಿ ನದಿ ಹಂಚಿನಲ್ಲಿ ವಡೆಯಾಂಡಹಳ್ಳಿ ಗ್ರಾಮದ ಸ.ನಂ.192, 326ರ ಮದ್ಯ ಕಾವೇರಿ ನದಿಯ ಮಾಧವ ಮಂತ್ರಿ ಅಣೆಕಟ್ಟು ಮತ್ತು ನಾಲೆ ದಾಟಿ ವಾಯುವ್ಯ ದಿಕ್ಕಿಗೆ ವಡೆಯಾಂಡಹಳ್ಳಿ ಗ್ರಾಮದ ಸ.ನಂ.125" ದಾಟಿ ಟಿ ಬೆಟ್ಟಹಳ್ಳಿ ಗ್ರಾಮದ ಸ.ನಂ.355, 304, 303ರ ಮೂಲಕ ಮುಡುಕುತೊರೆ ಸ್ನಾನ ಘಟ್ಟ ದಾಟಿ ವಾಯುವ್ಯ ದಿಕ್ಕು ಉತ್ತರಾಭಿಮುಖವಾಗಿ ಚಲಿಸಿ ಇದೇ ರಿ.ಸ.ನಂ. 287ರ ವಾಯುವ್ಯ ಬಿಂದುವಿನಲ್ಲಿ ಅಂದರೆ ತಲಕಾಡು ಪಟ್ಟಣ ಪಂಚಾಯಿತಿ ಪರಿಷ್ಕೃತ ಸರಹದ್ದಿನ ಎಲ್ಲೆಯ ಪ್ರಾರಂಭವಾದ 'P' ಬಿಂದುವಿನಲ್ಲಿ ವಿಲೀನವಾಗುತ್ತದೆ.

## GOVERNMENT OF KARNATAKA

**No.UDD 83 MLR 2025(e)**

Karanataka Government Secretariat,
Vikasa Soudha,
Bangalore, **dated:31/12/2025.**

## NOTIFICATION

Whereas the Notification to declare the Grama Panchayat of Talakadu (Grama Panchayat comprising of Talakadu of Vadeyandarahalli villages) including T.Bettahalli and Kurubalanahundi villages of B.Shettyhalli Grama Panchayat of T.Narasipura Taluk of Mysore District as a Transitional Area and further to specify such Areas as the Town Panchayat of Talakadu as mentioned in Schedule-A along with boundaries mentioned in Schedule-B was published as required by section-3 read with section-4, 9, 349 and 355 of the Karnataka Municipalities Act, 1964, vide Government Notification No:UDD 83 MLR 2025; dated 03/09/2025 by providing thirty days time and was published in part-III, No.537, Karnataka Gazette Extraordinary, dated 04/09/2025 inviting objections from all persons likely to be affected thereby on or before thirty days from the date of publication of the above Notification.

And whereas the Notification was made available to the public on the day of publication;

And whereas objections/suggestions received within the stipulated period have been taken into consideration;

Now, therefore, in exercise of the powers conferred by Section-3, 4, 9, 349 and 355 of the Karnataka Municipalities Act, 1964, the Hon'ble Governor, hereby

declare the Grama Panchayat of Talakadu (Grama Panchayat comprising of Talakadu of Vadeyandarahalli villages) including T.Bettahalli and Kurubalanahundi villages of B.Shettyhalli Grama Panchayat of T.Narasipura Taluk of Mysore District as mentioned in Schedule–A, along with boundaries mentioned in Schedule–B, as the "Transitional Area" and further specify such area to be the "Town Panchayat of Talakadu" having regard to:

1. The population of such area is not less than ten thousand and not more than twenty thousand;
2. The density of population in such area is not less than four hundred inhabitants to one square kilometer of area;
3. The percentage of employment in non-agricultural activities is not less than fifty per cent of the total employment.

By Order and in the name of the
Governor of Karnataka,

**(T Manjunath)**
Under Secretary to Government,
Urban Development Department

**No.UDD 83 MLR 2025(e)**

**<u>Schedule-A</u>**

| District | Name of the Local Body considered | Areas included | Total Area |
|---|---|---|---|
| Mysore | Grama Panchayat of Talakadu and T.Bettahalli & Koorubalanahundi villages of B.Shettyhalli Grama Panchayat | Areas of present Talakadu Grama Panchayat and T.Bettahalli & Koorubalanahundi villages of B.Shettyhalli Grama Panchayat | 28.97 Square Kilo Meters |

**<u>Schedule-B</u>**

Details of revised boundary of Talakadu Town Panchayath Area Talakadu Town Panchayat revised boundary starting from point 'P' i.e. from the north-west corner of S.No. 287 of T Bettahalli village, moving towards the north-east through the northern boundary of R.S.No. 287, passing along the border of Mandya district, passing between S.No. 283 and S.No. 243, Talakadu Malavalli main road, passing along S.No. 242, 241, 397, 239, moving towards the north-east, crossing the Kodagahalli road of Mandya district on the foothills of Mudukuthore Mallikarjunaswamy temple, moving from S.No. 236 and joining S.No. 224, 225 in the north-east direction. Then from the northeast direction, moving towards the east through R.S.No.225, 350, 351, moving along the middle border of S.No.136, 135, moving along the local road side via Vijayapura, moving towards the south at S.No.131, 128, 127 of Kurabalanahundi village, moving backwards (towards the west) at S.No. 88, 87, 86, moving towards S.No. 152, 153, then moving towards the

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



south, then passing through 170. 159, passing through Madhava Mantri Canal on the edge of the Naala, moving towards Agnya on the border of B.Shettyhalli (Kukkur village), moving towards S.No.262, 264, moving towards S.No. 1114, 1115, moving along the edge of Madhava Mantri Canal and reaching S.No. It meets at the source of the river Kaveri at the source and moves southwards from the source of the Agnya and passes through R.S.No.1174, 1175 towards the south and passes through R.S.No.1172, 1244, 1278, 1289, 1294, 1337, and meets at R.S.No.01 towards the south-west in the presence of the historical Talakadu Sand mount and Panchalinga temples and then moves from the south-west towards R.S.No. From 1, it passes in a northwesterly direction through S.No.218, 212, 211, 203, 202, Elleya S.No. of Vadeyandahalli village, then crosses the T.Narasipura Talakadu main road and bridge, crosses the Madhava Mantri dam and canal of the Kaveri river between S.No.192, 326 of Vadeyandahalli village, passes in a northwesterly direction through S.No.125 of Vadeyandahalli village, passes through S.No.355, 304, 303 of T.Bettahalli village, crosses the Mudukuthore Snana Ghatta, moves in a northwesterly direction towards the north and merges at the northwest point of this R.S.No. 287, i.e. at the 'P' point, which is the beginning of the revised boundary of Talakadu Town Panchayat.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH